**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರು.**

ಸಿ.ಸಿ ಸಂಖ್ಯೆಃ 800/2022

ಪಿಡಬ್ಲ್ಯುಃ 08 ಸಿಡಬ್ಲ್ಯುಃ 10
ದಿನಾಂಕಃ 08-07-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಬೀರಪ್ಪ ಲಮಾಣಿ |
| ತಂದೆ ಹೆಸರು | - ತಾವರೆಪ್ಪ ಲಮಾಣಿ |
| ವಯಸ್ಸು | - 32 ವರ್ಷ |
| ಉದ್ಯೋಗ | - ಪೋಲಿಸ ಪೇದೆ ಎಸ್ ಪಿ ಕಚೇರಿ ಹಾವೇರಿ |
| ವಾಸ ಸ್ಥಳ | - ಹಾವೇರಿ |

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.**

2018 ರಿಂದ 2023 ರ ತನಕ ನಾನು ಸವಣೂರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 10-01-2022 ರಂದು ಚಾಸಾ- 12 ರವರು ನನ್ನನ್ನು ಅವರ ಜೊತೆಯಲ್ಲಿ ಯಲವಿಗಿ ಗ್ರಾಮವನ್ನು ದಾಟಿ 200 ಮೀಟರ ಹೊರಕ್ಕೆ ಅಂತರದಲ್ಲಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಘಟನಾ ಪಂಚನಾಮೆಯನ್ನು ಮದ್ಯಾಹ್ನ 2.30 ರಿಂದ 3.00 ಗಂಟೆಯವರೆಗೆ ಚಾಸಾ- 2 ಮತ್ತು 3 ರವರ ಸಮಕ್ಷಮ ಚಾಸಾ- 1 ರವರು ತೋರಿಸಿದ ಜಾಗೆಯಲ್ಲಿ ಪಂಚನಾಮೆಯನ್ನು ಮಾಡಿದ್ದು ಸದರಿ ಪಂಚನಾಮೆಯನ್ನು ದಸ್ತುರಾಗಿ ನಾನು ಬರೆದಿರುತ್ತೇನೆ.

ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ- 2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ- 2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಭಾವ ಚಿತ್ರಗಳನ್ನು ತೋರಿಸಿದ್ದು ಅದರಲ್ಲಿ ತಾನು ಇರುವುದನ್ನು ನಿಖರಪಡಿಸಿಕೊಂಡಿದ್ದು ಅವುಗಳನ್ನು ಈಗಾಗಲೇ ನಿಪಿ - 3 ರಿಂದ 7 ಎಂದು ಗುರುತಿಸಲಾಗಿದೆ.

ಸದರಿ ಪಂಚನಾಮೆ ವೇಳೆಯಲ್ಲಿಯೇ ಟ್ಯಾಕ್ಟರ ನಂ. ಕೆಎ- 33 ಟಿ- 2492 ಮತ್ತು ಟ್ರೇಲರ ಸಿ ಟಿ ಡಬ್ಲೂ-9573 ನ್ನು ಪಂಚನಾಮೆ ಮಾಡಿ ವಾಹನವನ್ನು ಜಪ್ತ ಪಡಿಸಿಕೊಂಡಿರುತ್ತೇವೆ

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ ಬಿ ಟಿ ವಕೀಲರಿಂದಃ</u>**

ಅಪಘಾತವಾದ ಸ್ಥಳದಲ್ಲಿ ರಸ್ತೆಯು ತಗ್ಗು ದಿನ್ನೆ ಇಂದ ಕೂಡಿತ್ತು ಎಂದರೆ ಸರಿ. ಟ್ರಾಕ್ಟರನ ಹುಕ್ಕಾ ಕಟ್ಟಾಗಿತ್ತು ಎಂದರೆ ಸರಿ. ಪಂಚನಾಮೆಯನ್ನು ನೀವು ಬರೆದಿಟ್ಟು ಅದರ ಮೇಲೆ ಸಾಕ್ಷಿಯ ಸಹಿಯನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ಮುಂದುವರೆದು ಘಟನಾ ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆದಿರುತ್ತೇವೆ. ಆಕಸ್ಮಿಕವಾಗಿ ನಡೆದ ಘಟನೆಯಾಗಿದ್ದರು ಸಹ ಪಿರ್ಯಾಧಿಗೆ ವಿಮಾ ಸೌಲಭ್ಯ ಸಿಗುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಯಾರು ನಿಮಗೆ ಹೇಳಿ ಬರೆಸಿರುವುದಿಲ್ಲ, ನೀವೆ ಅದನ್ನು ಬರೆದಿಟ್ಟು ಸಾಕ್ಷಿಧಾರರ ಸಹಿಯನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.